ಆ) ಜಮಖಂಡಿ ತಾಲ್ಲೂಕಿನಲ್ಲಿ ಪ್ರೌಢಶಾಲೆಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕೊರತೆಯನ್ನು ಯಾವ ರೀತಿ ನಿವಾರಿಸಲಾಗುವುದು;

ಇ) ಪ್ರೌಢಶಾಲೆಗಳ ಕೊರತೆಯಿಂದ ವಿಶೇಷವಾಗಿ ಹೆಣ್ಣು ಮಕ್ಕಳ, ಬಡ ರೈತ ಮಕ್ಕಳು, ಕೂಲಿಕಾರರ ಮಕ್ಕಳು, ಶಾಲೆಗಳಿಂದ ದೂರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಜಮಖಂಡಿ ತಾಲ್ಲೂಕಿನಲ್ಲಿ ತಮದಡ್ಡಿ, ಹುಗಂಡಿ, ಹಿರೇಪಡಸಲಗಿ, ಬನಹಟ್ಟಿ (ಹೆಣ್ಣುಮಕ್ಕಳ), ರಬಕವಿ, ಜಮಖಂಡಿ, ಗಿರೀಶನಗರದಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಿರುವುದರಿಂದ ಯಾವಾಗ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) 1) 5 ಕಿ.ಮೀ. ಅಂತರದಲ್ಲಿ ಸರ್ಕಾರಿ/ಖಾಸಗಿ ಪ್ರೌಢಶಾಲೆ ಇರಬಾರದು. (ಪಟ್ಟಣ ಪ್ರದೇಶಕ್ಕೆ ಇದು ಅನ್ವಯಿಸುವುದಿಲ್ಲ.

2) ಪ್ರೌಢಶಾಲೆ ಪ್ರಾರಂಭಿಸುವ ಸ್ಥಳದಲ್ಲಿ 8ನೇ ತರಗತಿಗೆ ದಾಖಲಾಗಲು ಕನಿಷ್ಟ 50 ಮಕ್ಕಳು ಲಭ್ಯವಿರಬೇಕು.

3) ಸ್ಥಳೀಯರು 1 ಲಕ್ಷ ದೇಣಿಗೆ ನೀಡಬೇಕು.

4) ಪ್ರೌಢಶಾಲೆ ನಿರ್ಮಿಸಲು ಸ್ಥಳೀಯರು ನಿವೇಶನ ನೀಡಬೇಕು.

5) ಸರ್ಕಾರಿ ಕಟ್ಟಡ ನಿರ್ಮಿಸುವವರೆಗೂ ಸ್ಥಳೀಯರು ಪ್ರೌಢಶಾಲೆಗಾಗಿ ಬಾಡಿಗೆ ರಹಿತ ಕಟ್ಟಡ ನೀಡಬೇಕು.

ಆ) 02 ಸ್ಥಳಗಳಿಗೆ ಪ್ರಸ್ತಾವನೆ ಬಂದಿರುತ್ತವೆ. 2006–07ನೇ ಸಾಲಿನಿಂದ ಹೊಸ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಬಂದಿದೆ.

ಈ) ಜಮಖಂಡಿ ತಾಲ್ಲೂಕಿನ ಹುಗಂಡಿ ಮತ್ತು ಹಿರೇಪಡಸಲಗಿ ಗ್ರಾಮಗಳಿಗೆ ಹೊಸ ಸರ್ಕಾರಿ ಪ್ರೌಢಶಾಲೆಗಳ ಮಂಜೂರಾತಿ ಕೋರಿ ಪ್ರಸ್ತಾವನೆ ಬಂದಿರುತ್ತದೆ. 2006–07ನೇ ಸಾಲಿನಿಂದ ಹೊಸ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

534(780) ಶ್ರೀ ಸಿದ್ದು ಸವದಿ (ಜಮಖಂಡಿ) :– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಮಖಂಡಿ ತಾಲ್ಲೂಕಿನ ಸಾವಳಗಿ–ತುಂಗಳ ಏತ ನೀರಾವರಿ ಯೋಜನೆಯ ಪ್ರಗತಿ ಈಗ ಯಾವ ಹಂತದಲ್ಲಿದೆ;

ಆ) ಈ ಯೋಜನೆಯನ್ನು ಪೂರ್ಣಗೊಳಿಸಲು ಬೇಕಾಗಿರುವ ಕಾಲಾವಧಿಯೆಷ್ಟು;

ಇ) ಈ ಯೋಜನೆಗೆ ಇದುವರೆವಿಗೂ ಖರ್ಚಾದ ಹಣವೆಷ್ಟು ಹಾಗೂ ಇದನ್ನು ಪೂರ್ಣಗೊಳಿಸಲು ಇನ್ನೂ ಬೇಕಾಗಿರುವ ಹಣವೆಷ್ಟು;

ಈ) ಈ ಯೋಜನೆಗೆ ಕರೀಮಸೂತಿಯಿಂದ ನೀರು ಪಡೆದರೆ ಯೋಜನೆಯ ಮೊತ್ತ ದುಬಾರಿಯಾಗುವುದಲ್ಲದೇ ನೀರಿನ ಕೊರತೆ ಉಂಟಾಗುವುದಿಲ್ಲವೇ;

ಉ) ಈ ಯೋಜನೆಗೆ ಕೃಷ್ಣಾ ನದಿಯಿಂದ ನೇರವಾಗಿ ನೀರನ್ನು ಪಡೆಯಲು ಇರುವ ತೊಂದರೆಗಳೇನು;

ಊ) ಕರೀಮಸೂತಿ ಹಾಗೂ ತುಂಗಳ–ಸಾವಳಗಿ ಯೋಜನೆಗಳಿಗೆ ಸಾಕಾಗುವಷ್ಟು ನೀರನ್ನು ಹಿಪ್ಪರಗಿ ಬ್ಯಾರೇಜ್‌ನಿಂದ ಪಡೆಯಲು ಸಾಧ್ಯವೇ;

ಋ) ಸಾಧ್ಯವಾದಲ್ಲಿ, ಈ ನೀರನ್ನು ಯಾವ ಮಾರ್ಗದಿಂದ ಪಡೆಯಲಾಗುವುದು;

ಎ) ಆಲಮಟ್ಟಿ ಹಿನ್ನೀರಿನಿಂದ ನೀರನ್ನು ಪಡೆದಲ್ಲಿ ಯೋಜನಾ ವೆಚ್ಚವು ಕಡಿಮೆಯಾಗಿ ನೀರು ಲಭ್ಯವಾಗುವುದು ನಿಜವೇ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು):

ಅ) ಸಾವಳಗಿ–ತುಂಗಳ ಏತ ನೀರಾವರಿ ಯೋಜನೆಯ ಇಂಟೇಕ್ ಕಾಲುವೆ, ಜ್ಯಾಕವೆಲ್, ರೈಜಿಂಗ್ ಮೇನ್ ಹಾಗೂ ಡೆಲಿವರಿ ಚೇಂಬರ್‌ಗಳ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಯೋಜನೆಯ 7.42 ಕಿಮೀ. ಉದ್ದದ ಪಶ್ಚಿಮ ಕಾಲುವೆಯ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಸಧ್ಯದಲ್ಲಿಯೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಪೂರ್ವ ಕಾಲುವೆಯ ಪಂಕ್ತೀಕರಣದ ಸರ್ವೆ ಹಾಗೂ ಅನ್ವೇಷಣಾ ಕೆಲಸಗಳ ವಿವರವಾದ ವರದಿಯು ಅನುಮೋದನೆಯ ಹಂತದಲ್ಲಿರುತ್ತದೆ.

ಆ) ಯೋಜನೆಯನ್ನು 2 ವರ್ಷಗಳ ಕಾಲಾವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ಇ) ಮೇ–2006 ರವರೆಗೆ ರೂ. 5.80 ಕೋಟಿ ಮೊತ್ತ ವಿನಿಯೋಗಿಸಲಾಗಿದೆ. ಯೋಜನೆಯನ್ನು ಪೂರ್ಣಗೊಳಿಸಲು ಬಾಕಿ ಮೊತ್ತ ರೂ. 44.00 ಕೋಟಿ ಬೇಕಾಗುವುದು.

ಈ) ಸಾವಳಗಿ–ತುಂಗಳ ಏತ ನೀರಾವರಿ ಯೋಜನೆಯನ್ನು ಹಲ್ಯಾಳ ಏತ ನೀರಾವರಿ ಯೋಜನೆಗೆ ಸೇರಿಸಲಾಗಿದ್ದು, ಈ ಮುಂಚೆ ಕರೀಮಸೂತಿ ಏತ ನೀರಾವರಿ ಯೋಜನೆಯ ಮೂಲಕ ಸಾವಳಗಿ–ತುಂಗಳ ಪ್ರದೇಶಕ್ಕೆ ನೀರಾವರಿ ಒದಗಿಸಲು ಯೋಜಿಸಲಾಗಿತ್ತು. ಈಗ ಸಾವಳಗಿ–ತುಂಗಳ ಪ್ರದೇಶಕ್ಕೆ ಹಲ್ಯಾಳ

ಪೂರ್ವ ಕಾಲುವೆಯಿಂದ ಏತ ನೀರಾವರಿ ಮೂಲಕ ನೀರನ್ನು ಒದಗಿಸಲು ಯೋಜಿಸಲಾಗಿದೆ. ಇದರಿಂದ ಕರೀಮಸೂತಿ ಏತ ನೀರಾವರಿ ಯೋಜನೆಗೆ ನೀರಿನ ಕೊರತೆ ಉಂಟಾಗುವ ಸಾಧ್ಯತೆ ಇರುವುದಿಲ್ಲ.

ಊ) ಸಾವಳಗಿ–ತುಂಗಳ ಏತ ನೀರಾವರಿ ಯೋಜನೆಯು ಹಿಪ್ಪರಗಿ ಯೋಜನೆಯ ಭಾಗವಾಗಿದ್ದು ಕೃಷ್ಣಾ ಜಲವಿವಾದ ನ್ಯಾಯಾಧೀಕರಣದ ಅಡಿಯಲ್ಲಿ, ಹಿಪ್ಪರಗಿ ಯೋಜನೆಗೆ 12.10 ಟಿಎಂಸಿ ನೀರಿನ ಹಂಚಿಕೆ ಆಗಿರುತ್ತದೆ. ಆದುದರಿಂದ ಕೃಷ್ಣಾ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ಹಿಪ್ಪರಗಿ ಜಲಾಶಯದಡಿ ಶೇಖರಿಸಿದ ನೀರನ್ನೇ ಈ ಯೋಜನೆಗೆ ಉಪಯೋಗಿಸಬೇಕಾಗುತ್ತದೆ.

ಋ) ಸದರಿ ಯೋಜನೆಗಳಡಿ ಅಳವಡಿಸಿದ ಬೆಳೆಪದ್ಧತಿಗೆ ಅನುಸಾರವಾಗಿ ಬೇಕಾದ ನೀರಿನ ಪ್ರಮಾಣವನ್ನು ಗಣನೆಯಲ್ಲಿರಿಸಿಕೊಂಡು ಹಿಪ್ಪರಗಿ ನೀರಾವರಿ ಯೋಜನೆಯನ್ನು ಮಾರ್ಪಡಿಸಲಾಗಿದ್ದು, ಹಾಗೂ ಹಿಪ್ಪರಗಿ ಯೋಜನೆಗೆ ಬೇಕಾಗುವ ಒಟ್ಟಾರೆ ನೀರಿನ ಪ್ರಮಾಣ 12.10 ಟಿಎಂಸಿ ಆಗಿದೆ. ಆದುದರಿಂದ ಈ ಯೋಜನೆಗಳಿಗೆ ಬೇಕಾಗುವಷ್ಟು ನೀರು ಹಿಪ್ಪರಗಿ ಬ್ಯಾರೇಜಿನಿಂದ ಲಭ್ಯವಾಗುವುದು.

ಋ) ಹಿಪ್ಪರಗಿ ಯೋಜನೆ ಅಡಿ ಬರುವ ಹಲ್ಯಾಳ ಪೂರ್ವ ಕಾಲುವೆಯ ಕಿಮೀ. 20 ರಲ್ಲಿ ನೀರನ್ನು ಎತ್ತಿ ಕರೀಮಸೂತಿ ಏತ ನೀರಾವರಿಯಡಿ ಬರುವ ಪೂರ್ವ ಮತ್ತು ಪಶ್ಚಿಮ ಕಾಲುವೆಗಳ ಮೂಲಕ ಮತ್ತು ಇದೇ ಹಲ್ಯಾಳ ಪೂರ್ವ ಕಾಲುವೆಯ ಕಿಮೀ. 39.986 ರಲ್ಲಿ ನೀರನ್ನು ಎತ್ತಿ ಸಾವಳಗಿ–ತುಂಗಳ ಏತ ನೀರಾವರಿ ಅಡಿ ಬರುವ ಪೂರ್ವ ಮತ್ತು ಪಶ್ಚಿಮ ಕಾಲುವೆಗಳಿಂದ ಹನಿ ನೀರಾವರಿ ಮೂಲಕ ನೀರನ್ನು ಒದಗಿಸಲಾಗುವುದು.

ಎ) ಕೃಷ್ಣಾ ಜಲವಿವಾದ ನ್ಯಾಯಾಧೀಕರಣದ ನೀರಿನ ಹಂಚಿಕೆಯಂತೆ ಹಿಪ್ಪರಗಿ ನೀರಾವರಿ ಯೋಜನೆಗೆ ನಿಗದಿಗೊಳಿಸಲಾದ ನೀರಿನ ಹಂಚಿಕೆಯಲ್ಲೇ ಸಾವಳಗಿ–ತುಂಗಳ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

535(782) ಶ್ರೀ ಸಿದ್ದುಸವದಿ (ಜಮಖಂಡಿ) :– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಮಖಂಡಿ ತಾಲೂಕಿನಲ್ಲಿರುವ ಜಿ.ಎಲ್.ಬಿ.ಸಿ.ಯ ಹಂಚು ಕಾಲುವೆಗಳು ಮತ್ತು ಸರ್ವಿಸ್ ರಸ್ತೆ ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸುಮಾರು ಹತ್ತು ವರ್ಷಗಳಿಂದ ದುರಸ್ತಿಯಾಗದೇ ರೈತರಿಗೆ ನೀರು ದೊರೆಯದಂತಾಗಿರುವುದು ಹಾಗೂ ರಸ್ತೆಗಳ ಮೇಲೆ ಅಡ್ಡಾಡದಂತಹ ಸ್ಥಿತಿ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;